


# ಭುವನ್ ಲೋಕದಲ್ಲಿ...

‘ಹಲೋ 123’ ಸಿನಿಮಾ ಮೂಲಕ ನಿರ್ದೇಶಕ ಯೋಗರಾಜ್ ಭಟ್ಟರ ಶಾಲೆ ಸೇರಿದ್ದಾರೆ ನಟ ಭುವನ್ ಪೊನ್ನಣ್ಣ. ಕೊಂಚ ಬ್ರೇಕ್ ನಂತರ ಹೊಸ ಹುಮ್ಮಸ್ಸಿನಲ್ಲಿ ಮತ್ತೆ ಸಿನಿರಂಗಕ್ಕೆ ಕಾಲಿಟ್ಟಿರುವ ಅವರು, ‘ಸುಧಾ’ದೊಂದಿಗೆ ತಮ್ಮ ಮನದ ಮಾತುಗಳನ್ನು ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್.

“ಈಗಿನ ಯಾವ ನಟರನ್ನಾದರೂ ಕೇಳಿ ನೋಡಿ, ಅವರ ಆಸೆ ಏನೆಂದು. ಒಂದು ಉತ್ತರವಂತೂ ಖಾತ್ರಿ; ‘ಯೋಗರಾಜ್ ಭಟ್ಟರ ಜೊತೆ ಒಂದು ಸಿನಿಮಾದಲ್ಲಾದರೂ ಕೆಲಸ ಮಾಡಬೇಕು’ ಎಂಬುದು. ಸಿನಿಮಾರಂಗಕ್ಕೆ ಹೆಜ್ಜೆ ಇಟ್ಟಾಗ ನನಗೂ ಇದೇ ಆಸೆ ಇದ್ದದ್ದು. ಈಗ ಅದಕ್ಕೆ ಕಾಲ ಕೂಡಿಬಂದಿದೆ...”

ಕೆಲ ವರ್ಷಗಳ ನಂತರ ಸಿನಿಮಾರಂಗಕ್ಕೆ ಮರಳಿರುವ ನಟ ಭುವನ್ ಪೊನ್ನಣ್ಣ ತಮ್ಮ ಮಾತಿನ ಲಹರಿಯನ್ನು ಹರಿಬಿಟ್ಟಿದ್ದು ಹೀಗೆ.

‘ಜಸ್ಟ್ ಮಾತ್‌ಮಾತಲ್ಲಿ’ ಸಿನಿಮಾದಲ್ಲಿ ವಿಲನ್ ಆಗಿ ನಟಿಸಿದ್ದ ಭುವನ್, ‘ಕೂಲ್’, ‘ಸಖತ್ ಹಾಟ್ ಮಗ’, ‘ಕುಚಿಕು ಕುಚಿಕು’ ಸಿನಿಮಾದಲ್ಲಿ ಕಾಣಿಸಿಕೊಂಡರು. ‘ರಾಂಧವ’ ಸಿನಿಮಾದಲ್ಲಿ ನಾಯಕನಟನಾಗಿ ಪರಿಚಿತಗೊಂಡರು. ‘ಪ್ರಣಯರಾಜ’ ಸಿನಿಮಾ ನಂತರ ಸ್ವಲ್ಪ ಕಾಲ ಬ್ರೇಕ್ ತೆಗೆದುಕೊಂಡಿದ್ದರು. ಈಗ ಯೋಗರಾಜ ಭಟ್ಟರ ಸಿನಿಮಾ ಮೂಲಕ ಮರಳುತ್ತಿದ್ದು, ಇದು ತಮ್ಮ ರೀ ಎಂಟ್ರಿಗೆ ಅತ್ಯುತ್ತಮ ಅವಕಾಶ ಎಂದು ಹೇಳಿಕೊಂಡಿದ್ದಾರೆ.

‘ಯೋಗರಾಜ್ ಭಟ್ಟರ ಸಿನಿಮಾದಲ್ಲಿ ನಟಿಸುತ್ತಿರುವುದು ಬಹಳ ಖುಷಿ. ಈ ಸಿನಿಮಾವನ್ನು ತುಂಬಾ ಪ್ರೀತಿಯಿಂದ, ವಿದ್ಯಾರ್ಥಿಯೊಬ್ಬ ಹೊಸ ಶಾಲೆಗೆ ಹೋಗುವ ರೀತಿಯಲ್ಲಿಯೇ ಮಾಡುತ್ತಿದ್ದೇನೆ. ವಿದ್ಯಾರ್ಥಿಯಲ್ಲಿನ ಭಯ, ಖುಷಿ, ಆತಂಕ, ಕುತೂಹಲ, ಆಸೆ... ಎಲ್ಲವೂ ಇದೆ. ನಾನು ನಾಟಕಗಳನ್ನು ಮಾಡಿದ್ದರೂ, ನಟನಾ ತರಬೇತಿಗಳನ್ನು ಪಡೆದಿದ್ದರೂ ಭಟ್ಟರೊಂದಿಗೆ ಕೆಲಸ ಮಾಡುವುದು ಪ್ರಯೋಗಶಾಲೆಯಂತೆ. ಅವರಿಂದ ಕಲಿಯುವುದು ತುಂಬಾ ಇದೆ’ ಎಂದು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

‘ಹಲೋ 123’ ಸಿನಿಮಾದಲ್ಲಿ ಸಂಗೀತಗಾರನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ ಭುವನ್. ಜೆನ್ ಝೀ ತಲೆಮಾರನ್ನು ಕೇಂದ್ರವಾಗಿರಿಸಿ ಈ ಸಿನಿಮಾ ಮೂಡಿಬರುತ್ತಿರುವುದಾಗಿ ಹೇಳಿದ್ದಾರೆ.

‘ಜೆನ್ ಝೀ ಕನ್ನಡ ಸಿನಿಮಾಗಳನ್ನು ನೋಡಬೇಕು. ಅವರೇ ಮುಂದೆ ಸಿನಿಮಾರಂಗವನ್ನು ಮುನ್ನಡೆಸಬೇಕಾದ್ದರಿಂದ ಅವರನ್ನು ಸಿನಿಮಾಗಳಲ್ಲಿ ಒಳಗೊಳ್ಳುವುದು ಅವಶ್ಯವಾಗಿದೆ. ಜೊತೆಗೆ ಎಲ್ಲಾ ಪೀಳಿಗೆಯನ್ನು ಈ ಸಿನಿಮಾ ತಲುಪಲಿದೆ’ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

ಸಿನಿಮಾರಂಗದಿಂದ ಸ್ವಲ್ಪ ಅವಧಿ ಬ್ರೇಕ್‌ನಲ್ಲಿದ್ದರೂ ಸಿನಿಮಾ ಕುರಿತ ಕಲಿಕೆಯಿಂದ ಎಂದೂ ದೂರವಾಗಿಲ್ಲ ಎನ್ನುವುದು ಅವರ ಮಾತು.

“‘ರಾಂಧವ’, ‘ಪ್ರಣಯರಾಜ’ ಸಿನಿಮಾ ನಂತರ ಉತ್ತಮ ಕಥೆಗಳು ಬರಲಿಲ್ಲ. ಆರು ತಿಂಗಳು ಕಥೆಗಳನ್ನು ಕೇಳಿದೆ. ಸ್ವಲ್ಪ ಬದಲಾವಣೆಯಿರಲಿ ಎಂದು ಬ್ರೇಕ್ ತೆಗೆದುಕೊಂಡೆ. ಮದುವೆ, ಕುಟುಂಬದೊಂದಿಗೆ ಕಾಲ ಕಳೆದೆ. ಈಗ ಒಳ್ಳೆಯ ಸಿನಿಮಾದೊಂದಿಗೆ ಮರಳಿರುವ ಖುಷಿಯಿದೆ. ಮುಂದೆಯೂ ಉತ್ತಮ ಸಿನಿಮಾಗಳನ್ನು ನೀಡುವ ಆಸೆಯಿದೆ’ ಎಂದು ತಮ್ಮ ಅಭಿಲಾಷೆ ವ್ಯಕ್ತಪಡಿಸಿದ್ದಾರೆ.

ಪ್ರೇಕ್ಷಕರಿಗೆ ಮನರಂಜನೆ ನೀಡುವುದಷ್ಟೇ ಮುಖ್ಯ ಎನ್ನುವ ಭುವನ್, ಯಾವುದೇ ಸ್ಕ್ರಿಪ್ಟ್ ತಮ್ಮ ಮುಂದೆ ಬಂದಾಗ ಮೊದಲು ಗಮನಿಸುವ ಅಂಶ, ಈ ಕಥೆಗೆ ಪ್ರೇಕ್ಷಕರನ್ನು ಒಂದೂವರೆ ಗಂಟೆ ಕೂರಿಸುವ ಶಕ್ತಿ ಇದೆಯೇ ಎಂಬುದು. ಜನರ ತಲೆಗೆ ಅನವಶ್ಯಕವಾಗಿ ವಿಷಯಗಳನ್ನು ತುರುಕದೇ ಅವರಿಗೆ ಇಷ್ಟವಾಗುವಂಥ ಸಿನಿಮಾ ಮಾಡಬೇಕು. ಮನರಂಜನೆಯನ್ನೇ ನೀಡಬೇಕು ಎಂಬುದು ಭುವನ್ ಮನದಿಂಗಿತ. ■